ಅ) ಇಲ್ಲದಿದ್ದಲ್ಲಿ ಯಾವಾಗ ಹೂಳು ತೆಗೆಯಲು ಪ್ರಾರಂಭಮಾಡಲಾಗುವುದು?

ಆ) ರೈತ ಕಾಯಕ ಕೆರೆ ಕಾರ್ಯಕ್ರಮದಡಿಯಲ್ಲಿ ಬೇಲೂರು ತಾಲ್ಲೂಕಿನ ವಿಷ್ಣು ಸಮುದ್ರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ರೂ. 11.90 ಲಕ್ಷ ವೆಚ್ಚದಲ್ಲಿ ಸೇರಿರುತ್ತದೆ. ಆದರೆ ಅಂದಾಜು ಇನ್ನೂ ಮಂಜೂರು ಆಗಿರುವುದಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು) :

ಅ) ಪ್ರತಿ ಕೆರೆಯ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರಿ ಆದೇಶದಲ್ಲಿ ಕೆಲವು ನಿಬಂಧನೆಗಳನ್ನು ವಿಧಿಸಲಾಗಿರುತ್ತದೆ. ಅವುಗಳೆಂದರೆ ನೀರು ಬಳಕೆದಾರರ ಸಂಘ ಅಸ್ತಿತ್ವದಲ್ಲಿರುವುದು, ರೈತರ: ಸಮುದಾಯದ ಸಹಭಾಗಿತ್ವ ಇರುವುದು ಹಾಗೂ ಸಮುದಾಯದಿಂದ ಯೋಜನಾ ವೆಚ್ಚದ ಶೇಕಡ 15 ರಷ್ಟು ಹಣವನ್ನು ಭರಿಸುವುದು ಇತ್ಯಾದಿ. ಈ ನಿಬಂಧನೆಗಳಿಗೆ ಪೂರಕವಾಗಿ ಕ್ರಮ ಕೈಗೊಳ್ಳಲು ಪ್ರೇರಣೆ ನೀಡುವುದು, ತರಬೇತಿ ನೀಡುವುದು ಇತ್ಯಾದಿ, ಇವುಗಳ ಅವಶ್ಯಕತೆ ಇದ್ದು, ಇವುಗಳಿಗೆ ಕಾಲಾವಕಾಶ ಬೇಕಾಗಿರುತ್ತದೆ. ಸರ್ಕಾರದ ಆದೇಶದಲ್ಲಿ ಈ ಕೆಳಕಂಡಂತೆ ಕಾಲಾವಕಾಶ ನೀಡಲಾಗಿದೆ.

ಅ) ಅರಿವನ್ನು ಮೂಡಿಸುವುದು ಮತ್ತು ನೀರು ಬಳಕೆದಾರರ ಸಂಘ ರಚನೆ ಇಲಾಖಾ ಅಧಿಕಾರಿಗಳನ್ನು ಹೊಂದಿಕೊಳ್ಳುವಂತೆ ಮಾಡುವುದು ..6 ರಿಂದ 9 ತಿಂಗಳು.

ಆ) ಮೇಲೆ ಹೇಳಿರುವ ಸೂಚನೆಗಳಂತೆ ಕ್ರಮ ಕೈಗೊಂಡು ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಪಡಿತರ ಚೀಟಿಗಳ ವಿತರಣೆ

1448 (1658) - ಶ್ರೀ ಪುಟ್ಟರಂಗನಾಥ್. ಎಸ್.ಹೆಚ್. (ಬೇಲೂರು): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಡತನ ರೇಖೆಗಿಂತ ಕೆಳಗಿರುವ (ಬಿ ಪಿ ಎಲ್) ಕುಟುಂಬಗಳಿಗೆ ಪಡಿತರ ಚೀಟಿಯನ್ನು ವಿತರಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಆ) ಈ ಕಾರ್ಯಕ್ರಮದಲ್ಲಿ ಕೆಲವು ಬಡವರ್ಗದವರಿಗೆ ಪಡಿತರ ಚೀಟಿಯು ದೊರಕದಿರಲು ಕಾರಣಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ರಾಜ್ಯದಲ್ಲಿರುವ ಒಟ್ಟು 63, 80, 334 ಬಡ ಕುಟುಂಬಗಳಿಗೆ ಸಹಾಯಧನಯುಕ್ತ ಆಹಾರ ಧಾನ್ಯಗಳನ್ನು ಹಂಚಲು ಹಸಿರು ಪಡಿತರ ಚೀಟಿ, ಅಂತ್ಯೋದಯ ಅನ್ನ, ಹಾಗೂ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಬಡತನ ರೇಖೆಗಿಂತ ಕೆಳಗಡೆ ವಾಸಿಸುತ್ತಿರುವ ನೈಜ ಕುಟುಂಬಗಳನ್ನು ಗುರುತಿಸಿ ಎಲ್ಲಾ ಅರ್ಹ ಕುಟುಂಬಗಳಿಗೆ ಹೆಚ್ಚುವರಿ ಸಹಾಯ ಧನವನ್ನೊಳಗೊಂಡ ಹಳದಿ ಪಡಿತರ

ಚೀಟಿ ವಿತರಿಸಲು ರಾಜ್ಯಾದ್ಯಂತ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿ ಹಾಗೂ ಪಂಚಾಯತ್ ಕಾರ್ಯದರ್ಶಿಗಳನ್ನೊಳಗೊಂಡ ತಂಡಗಳು ಈ ಕಾರ್ಯವನ್ನು ನಡೆಸುತ್ತಿವೆ. ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದೆ. ನಗರ: ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವ ಬಡ ಕುಟುಂಬಗಳ ಸಮೀಕ್ಷೆ ಕಾರ್ಯವನ್ನು ಸ್ಥಳೀಯ ನಗರಸಭೆ: ಪುರಸಭೆ: ಪಟ್ಟಣ ಪಂಚಾಯಿತಿಯ ಕಂದಾಯಾಧಿಕಾರಿಗಳಿಂದ ನಡೆಸಲಾಗುತ್ತಿದೆ.

ಅ) ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹುಲ್‌ಸೂರ್ ಕ್ಷೇತ್ರದ ಜೀರಿಗ್ಯಾಳ - ಮಾಣೇಕೇಶ್ವರ ಗ್ರಾಮಗಳ ಹತ್ತಿರ ಬ್ಯಾರೇಜ್ ನಿರ್ಮಾಣ

1450 (1653) - ಶ್ರೀ ರಾಜೇಂದ್ರ ವರ್ಮ (ಹುಲ್ ಸೂರ್): ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜೀರಿಗ್ಯಾಳ - ಮಾಣೇಕೇಶ್ವರ ಗ್ರಾಮಗಳ ಹತ್ತಿರ ಮಾಂಜ್ರಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದು ನಿಜವೆ?

ಆ) ಹಾಗಿದ್ದಲ್ಲಿ, ಈ ಸ್ಥಳಗಳಲ್ಲಿ ಬ್ಯಾರೇಜ್ ನಿರ್ಮಾಣ ಕಾರ್ಯಕ್ಕಾಗಿ ಯಾವಾಗ ಮಂಜೂರಾತಿ ನೀಡಲಾಯಿತು; ಇದು ಈಗ ಯಾವ ಹಂತದಲ್ಲಿದೆ;

ಇ) ಈ ಕಾರ್ಯದಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು;

ಈ) ಅದಷ್ಟು ಶೀಘ್ರವಾಗಿ ಮೇಲ್ಕಂಡ ಸ್ಥಳದಲ್ಲಿ ಬ್ಯಾರೇಜ್ ನಿರ್ಮಿಸಲು ಸರ್ಕಾರದ ಮುಂದೆ ಇರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು) :

ಅ) ಹುಲಸೂರು ಮತಕ್ಷೇತ್ರದ ಜೀಗ್ಯಾಳ ಮತ್ತು ಮಾಣೇಕೇಶ್ವರ ಗ್ರಾಮಗಳ ಹತ್ತಿರ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆಯನ್ನು 2002-03ನೇ ಸಾಲಿನ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.